# ಅನುಮಾನಾಸ್ಪದ ಬ್ಯಾಂಕ್ ವ್ಯವಹಾರಗಳ ಮೇಲೆ ನಿಗಾವಹಿಸಿ



ಹೊಸಪೇಟೆ, ಮಾ-: (ಕ.ವಾ): ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಯನ್ವಯ ನಿಯಮಗಳನ್ನು ಪಾಲನೆ ಮಾಡಬೇಕು ಎಂದು ಬ್ಯಾಂಕಿನ ಅಧಿಕಾರಿಗಳಿಗೆ ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಾರ್ಚ 22ರಂದು ಜಿಲ್ಲೆಯ ವಿವಿಧ ಬ್ಯಾಂಕಿನ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಚುನಾವಣೆ ಪ್ರಕ್ರಿಯೆಯು ಅತ್ಯಂತ ಪಾರದರ್ಶಕವಾಗಿ ನಡೆಯಬೇಕಿದೆ. ಈ ನಿಟ್ಟಿನಲ್ಲಿ ಚುನಾವಣೆಯ ಸಂದರ್ಭದಲ್ಲಿ ಅಕ್ರಮವಾಗಿ ಹಣ ಸರಬರಾಜು ಪ್ರಕರಣಗಳು ಸಂಭವಿಸದಂತೆ ತೀವ್ರ ಕಟ್ಟೆಚ್ಚರ ವಹಿಸಬೇಕು. ಈ ಹಿನ್ನೆಲೆಯಲ್ಲಿ ಅನುಮಾನಾಸ್ಪದ ಬ್ಯಾಂಕಿನ ವ್ಯವಹಾರಗಳ ಮೇಲೆ ತೀವ್ರ ನಿಗಾವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಜಿಲ್ಲಾ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿ ಲೋಕೇಶ, ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಬಾಲಕೃಷ್ಣ ಭಟ್ ಸೇರಿದಂತೆ ಇತರರು ಇದ್ದರು. ಸಭೆಯಲ್ಲಿ ವಿವಿಧ ಬ್ಯಾಂಕಿನ ಅಧಿಕಾರಿಗಳು ಇದ್ದರು.

# ಪಾರ್ವತಿ ಬಂಜಾರ ಟ್ರಸ್ಟ್ ವತಿಯಿಂದ ಮಹಿಳಾ ಕಸೂತಿ ತರಬೇತಿ ಕೇಂದ್ರ




**ಚಾಲನೆ**

ಬಳ್ಳಾರಿ ಮಾ -: ಪಾರ್ವತಿ ಕೆ.ಹೆಚ್.ಬಿ ಕಾಲೋನಿಯಲ್ಲಿ ಕರ್ನಾಟಕ ರಾಜ್ಯ ಪಾರ್ವತಿ ಬಂಜಾರ ಮಹಿಳಾ ಒಕ್ಕೂಟದ ರಾಜ್ಯಾಧ್ಯಕ್ಷರು ಹಾಗೂ ಬಳ್ಳಾರಿ ಪಾರ್ವತಿ ಬಂಜಾರ ಟ್ರಸ್ಟ್ ವತಿಯಿಂದ ಅಧ್ಯಕ್ಷರಾದ ಶ್ರೀಮತಿ ಚಂಪಾ ಚವಾಣ್ ಇವರ ನೇತೃತ್ವದಲ್ಲಿ ಮಹಿಳಾ ಕಸೂತಿ ತರಬೇತಿ ಕೇಂದ್ರವನ್ನು ತಮ್ಮ ನವಾಸದಲ್ಲಿ ತುಳಸಿ ದೇವಿಗೆ ವಿಶೇಳ ಪೂಜೆಯನ್ನು ಸಲ್ಲಿಸುವ ಮೂಲಕ ಚಾಲನೆಯನ್ನು ನೀಡಲಾಯಿತು.

ಈ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ಕಮಲಾ ಮರಿಸ್ವಾಮಿ ಅವರು ಮಾತನಾಡಿ ಮಹಿಳಾ ಮಣಿಗಳಾದ ತಾವು ತಮ್ಮ ಕಾಲ ಮೇಲೆ ತಾವು ನಂತುಕೊಳ್ಳಬೇಕಾದರೆ, ಯಾವುದಾದರೂ ಒಂದು ವೃತ್ತಿಯನ್ನು ಅಥವಾ ಕೆಲಸವನ್ನು ಮಾಡಬೇಕೆಂದರು. ಅಲ್ಲದೆ ಮಹಿಳೆಯರು ಸಾಧನೆಯಲ್ಲಿ ಮುಂದೆ ಬರಬೇಕು ಎಂದು ಹೇಳಿದರು.

ಚಂಪಾ ಚವಾಣ್ ಅವರು ಇಂತಹ ಕಸೂತಿ ತರಬೇತಿ ಕೇಂದ್ರ ಮಾಡಿರೋದು ಬಹಳ ಹೆಮ್ಮೆ ಅನಸುತ್ತಿದೆ, ಇಂಥ ತರಬೇತಿಯನ್ನು ಪಡೆದು ತಾವು ಸ್ವಾವಲಂಬಿಗಳಾಗಿ ಬದುಕಬೇಕು, ಇನ್ನೂ ಹಲವಾರು ತರಬೇತಿ ಕೇಂದ್ರಗಳನ್ನು ಚಂಪಾ ಚವಾಣ್ ಅವರು ಪ್ರಾರಂಭ ಮಾಡಿ ರಾಜ್ಯಾದ್ಯಂತ ಬೆಳೆಯಲಿ ಎಂದು ಶುಭ ಹಾರೈಸಿದರು. ಇದೇ ವೇಳೆ ಅಧ್ಯಕ್ಷರಾದ ಶ್ರೀಮತಿ ಚಂಪಾ ಚವಾಣ್ ಅವರು ಮಾತನಾಡಿ ಮಹಿಳೆಯರಿಗಾಗಿ ಸೇವಾ ಮಾಡುವ ಗುರಿಯನ್ನು ಹೊಂದಿದ್ದೇನೆ, ಯಾಕೆಂದರೆ ಮಹಿಳೆಯರಿಗಾಗಿ ನಾನು ಇಂಥ ತರಬೇತಿಗಳನ್ನು ಟ್ರಸ್ಟ್ ಮೂಲಕ ಸೇವೆ ಮಾಡಬೇಕೆಂದು ಮುಂದೆ ಬಂದಿದ್ದು, ತಮಗೆ ತರಬೇತಿಗಳನ್ನು ಪಡೆಯಲು ಇಚ್ಛಿಸಿದರೆ, ಇದಕ್ಕೆ ಸಹಕಾರ ಸ್ಫೂರ್ತಿ ಮಾಡುತ್ತೇನೆ ಎಂದು ಹೇಳಿದರು. ಅದಕ್ಕಾಗಿ ಮಹಿಳೆಯರಿಗಾಗಿ ಪಾರ್ವತಿಯ ಹೆಸರಿನಲ್ಲಿ ಪಾರ್ವತಿ ಬಂಜಾರ ಟ್ರಸ್ಟ್ನ್ನು ಪ್ರಾರಂಭ ಮಾಡಿದ್ದೇನೆ ಎಂದರು.

ಈ ಟ್ರಸ್ಟ್ ವತಿಯಿಂದ ತರಬೇತಿಯನ್ನು ಬಂಜಾರ ಸಮುದಾಯಕ್ಕೆ ಒಂದೇ ಅಲ್ಲದೆ ಎಲ್ಲಾ ಸಮುದಾಯದವರಿಗೆ ಅವಕಾಶ ಮಾಡಿಕೊಡುತ್ತೇವೆ,ಇದು ಅಲ್ಲದೆ ಬೇರೆ ಬೇರೆ ತರಬೇತಿಯನ್ನು ಉಚಿತವಾಗಿ ನೀಡುವುದರ ಜೊತೆಗೆ ಉದ್ಯೋಗವನ್ನು ಕಲ್ಪಿಸಿ ಕೊಡುತ್ತೇವೆ, ಇಂತಹ ಹಲವಾರು ಕಾರ್ಯಕ್ರಮಗಳನ್ನು ಮಾಡಲು ಆ ದೇವರು ನನಗೆ ಶಕ್ತಿ ಆಶೀರ್ವಾದ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ವಕೀಲರಾದ ಬಿ ಕವಿತಾ, ಗ್ರಾಮ ಪಂಚಾಯತಿ ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ಹೇಮಾ ಮಂಜುನಾಥ್, ಎಐವೈಎಫ್ ಕರ್ನಾಟಕ ರಾಜ್ಯ ಮಹಿಳಾ ಅಧ್ಯಕ್ಷರಾದ ಪದ್ಮಾವತಿ ಸುಭಾಳಚಾರ್ಯ, ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀಮತಿ ಲಲಿತಾ ನಾಯಕ್, ಪಾರ್ವತಿ ಬಂಜಾರ ಮಹಿಳಾ ಒಕ್ಕೂಟದ ಜಿಲ್ಲಾಧ್ಯಕ್ಷರಾದ ಶ್ರೀಮತಿ ಶೋಭಾ, ಟ್ರಸ್ಟ್ ನ ಖಜಾಂಚಿಗಳಾದ ಶ್ರೀಮತಿ ಶಾಂತಾಬಾಯಿ, ಸಮಾಜ ಸೇವಕಿ ಪ್ರವಳಿಕ, ಕಾಂಗ್ರೆಸ್ ಮುಖಂಡರಾದ ಕವಿತಾ, ಶ್ರೀದೇವಿ, ರಾಮನಗರ ಗೀತಾ ಸಿರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಕಸಾಪ ರಾಜಣ್ಣ ಅಂಗಡಿಯವರಿಗೆ ನುಡಿನಮನ



ಕೊಪ್ಪಳ:-ಆತ್ಮೀಯುತೆ ಅಂದ್ರೆ ರಾಜಣ್ಣ, ರಾಜಣ್ಣ ಅಂದ್ರೆ ಆತ್ಮೀಯತೆ,ಸ್ನೇಹಶೀಲತೆವೆಂಬಗುಣ ಇಡೀ ಮಾನವ ಸಂಬಂಧಗಳಲ್ಲಿ ಬಹಳ ಅಪರೂಪ, ಆತ್ಮೀಯ ಸಂಬಂಧ ಸ್ನೇಹಶೀಲತೆ. ಯಾವುದೇ ಜಾತಿ, ಜಾತಕ, ವರ್ಗ, ಬಂಧುತ್ವಗಳಂತಹ ಹಿನ್ನೆಲೆಗಳನ್ನು ನೋಡದೆ ಕೇವಲ ಆತ್ಮಗಳ ನಡುವಿನ ನಿಕಟತೆಯಪ್ರತಿರೂಪದಂತಿರುತ್ತದೆ

ಇಂತಹ ಸಂಬಂಧಗಳನ್ನು ಬಿತ್ತರಿಸುವುದಕ್ಕಾಗಿಯೇ, ವಿಸ್ತರಿಸುವುದಕ್ಕಾಗಿಯೇ, ಉಳಿಸಿಕೊಳ್ಳುವುದಕ್ಕಾಗಿಯೇ ಸಮಾಜದಲ್ಲಿ ಕೆಲವರು ಉದಾಹರಣೆಯಂತಿರುತ್ತಾರೆಅಂ ಥವರೊಂದಿಗಿನ ಆತ್ಮೀಯತೆಒಡನಾಟಗಳಿಂದಾಗಿ ನಮ್ಮ ಬದುಕಿನಲ್ಲಿ ಒಂದುಸವಿನೆನಪಾಗಿ ಉಳಿಯುತ್ತಾರೆ ಅಂತಹುದೆ ಸವಿನೆನಪನ್ನು ಉಳಿಸಿ ನಮ್ಮನ್ನಗಲಿದಆತ್ಮೀಯಒಡನಾಡಿ ಎಂದರೆ ಶ್ರೀ ರಾಜಶೇಖರ್ ಅಂಗಡಿ. ಅದ್ಭುತ ಸಂಘಟಕ ರಾಜಣ್ಣ ಓದಿದ್ದು ಕಡಿಮೆ ಅನುಭವ ಜಾಸ್ತಿ, ಹಿಡಿದ ಕೆಲಸವನ್ನು ಸಾಧಿಸುವ ಹಠವಾದಿ, ವ್ಯವಹಾರಿಕ ಕುಶಲತೆಗಳಿದ್ದರೂ ಕೂಡ ಪರಿಷತ್ತು ಹಾಗೂ ಆತ್ಮೀಯ ಬಳಗಗಳ ಪ್ರಶ್ನೆ ಬಂದಾಗ ವ್ಯವಹಾರಕ್ಕಿಂತ ಹೆಚ್ಚು ಹೃದಯವಂತಿಕೆಗೆ ಮಹತ್ವ ನೀಡುತ್ತಿದ್ದ. ಸಾಹಿತಿಗಳೇ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಬೇಕು ಎನ್ನುವ ಸಂಪ್ರದಾಯವನ್ನು ಬದಿಗೊತ್ತಿ ಒಬ್ಬ ಸಂಘಟಕ, ಒಬ್ಬ ಸಾಹಿತ್ಯ ಪ್ರೇಮಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಹಿರೆವಂಕುಲಕುಂಟ ಅಳವಂಡಿ, ಬನ್ನಿಕೊಪ್ಪ ಕಾರಟಗಿ ಗಂಗಾವತಿ ಸಾಹಿತ್ಯ ಸಮ್ಮೇಳನಗಳನ್ನು ಅದ್ದೂರಿಯಾಗಿ ಸಂಘಟಿಸಿ ಯಶಸ್ವಿಯಾಗಿರೋದು ರಾಜಣ್ಣನವಿಶೇಷತೆಯಾಗಿತ ಪ್ರತಿಸಮ್ಮೇಳನಗಳ ಪೂರ್ವಸಿದ್ಧತೆಯಲ್ಲಿ ಎಲ್ಲರ ಅಭಿಪ್ರಾಯಗಳನ್ನು ಪಡೆಯುತ್ತಿದ್ದ ರಾಜಣ್ಣ ಕೊನೆಗೆ ತನ್ನ ನಿರ್ಣಯದಂತೆ ಸಮ್ಮೇಳನಗಳನ್ನು ಅದ್ದೂ ರಿಯಾಗಿ ಸಂಘಟಿ ಸುತ್ತಿದ್ದ ,ಗೋಷ್ಠಿಗಳಅಯ್ಕೆ, ವಿಷಯಗಳ ಆಯ್ಕೆ, ಉಪನ್ಯಾಸಕರ ಆಯ್ಕೆ, ಸಂಪನ್ಮೂಲ ವ್ಯಕ್ತಿಗಳಆಯ್ಕೆಯ ಸಂದರ್ಭದಲ್ಲಿ ಸಮಿತಿಯ ಸದಸ್ಯರಿಗೆ ಪೂರ್ಣ ಸ್ವಾತಂತ್ರ್ಯ ನೀಡಿ ಹೊಸ ಹೊಸ ಗೋಷ್ಠಿಗಳು ಸಮ್ಮೇಳನ ಗಳಲ್ಲಿ ಆಯೋಜನೆವಾಗುವಂತೆ ವ್ಯವಸ್ಥೆ ಮಾಡುವ ರೀತಿಯಿಂದಾಗಿ. ಹಲವಾರು ಹೊಸ ಮುಖಗಳಿಗೆ ಸಮ್ಮೇಳನಗಳಲ್ಲಿ ಅವಕಾಶ ದೊರೆಯುತ್ತಿತ್ತು ಡಾ,ಶೇಖರ್ ಗೌಡರ ಬಲಗೈ ಭಂಟ ಡಾ, ಶೇಖರ ಗೌಡ ಮಾಲಿ ಪಾಟೀಲರಂತಹ ಅನೇಕ ಗಣ್ಯ ವ್ಯಕ್ತಿಗಳ ಸಂಪರ್ಕದಿಂದಾಗಿ ತನ್ನಆತ್ಮೀಯತೆಯಸಂಪರ್ಕವನ್ನು ರಾಜ್ಯಮಟ್ಟದವರೆಗೆ ವಿಸ್ತರಿಸಿಕೊಂಡು ಶೇಖರ್ ಗೌಡ ಮಾಲಿ ಪಾಟೀಲ ಬಲಗೈ ಭಂಟನಂತೆ ಸಾಹಿತಿಕ ಸಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿ ಪ್ರತಿಯೊಂದು ಯಶಸ್ವಿಗೊ ಳಿಸುವ ಕಲೆಯನ್ನು ನಿಜಕ್ಕೂ ಮೆಚ್ಚಬೇಕಾದ್ದುದೆ, ಶೇಖರ ಗೌಡ ಮಾಲಿ ಪಾಟೀಲರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಲೇಬೇಕೆನ್ನುವ ಹಠದೊಂದಿಗೆ ಇಡೀ ರಾಜ್ಯ ಸುತ್ತಿ ರಾಜ್ಯದ ಪ್ರತಿಯೊಬ್ಬ ಪರಿಷತ್ತಿನ ಸದಸ್ಯರಿಗೆ ಮನವಿ ಮಾಡಿದರು ಕೂಡ ಶೇಖರಗೌಡರ ಸೋಲು ರಾಜಣ್ಣನಿಗೆ ಒಂದು ದೊಡ್ಡ ಆಘಾತ ತಂದಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರ ಸಂಖ್ಯೆ ಕೆಲವು ನೂರುಗಳ ಲೆಕ್ಕದಲ್ಲಿದ್ದ ಸದಸ್ಯರ ಸಂಖ್ಯೆಯನ್ನು ಸಾವಿರದ ಲೆಕ್ಕಕ್ಕೆ ವಿಸ್ತರಿಸಿದ ಕೀರ್ತಿ ರಾಜಣ್ಣನಿಗೆ ಸಲ್ಲುತ್ತದೆ*ಜನರ ಸಾಹಿತ್ಯ ಪರಿಷತ್* ಪರಿಷತ್ತಿನ ಸಂಘಟನೆ ಎಂದರೆ ತನ್ನ ಆರೋಗ್ಯ ತನ್ನವ್ಯವಹಾರವನ್ನು ಲೆಕ್ಕಿಸದೆ ಚಟವಟಿಕೆಯಲ್ಲಿ ತೊಡಗುತಿದ್ದ ರಾಜಣ್ಣನಿಗೆ ನಾಡಿನ ತುಂಬೆಲ್ಲ ಆತ್ಮೀಯ ಬಳಗವೇ ಹೆಚ್ಚಿದೆ ಇಷ್ಟೆಲ್ಲಾ ಇದ್ದರೂ ಕೂಡ ಒಂದು ಸಾಹಿತ್ಯ ಸಮ್ಮೇಳನದಲ್ಲಿಯೂ ಕೂಡ ನನ್ನ ಗಮನಕ್ಕೆ ಬಂದಂತೆ ರಾಜಣ್ಣ ನೇರವಾಗಿ ಸನ್ಮಾನವನ್ನು ಸ್ವೀಕರಿಸಲಿಲ್ಲ ಪರಿಷತ್ತಿನ ಅಧ್ಯಕ್ಷನ್ನಾಗಿ ನಾನು ಇತರರಿಗೆ ಸನ್ಮಾನ ಮಾಡಬೇಕೆ ಹೊರತು ನಾನೇ ಸನ್ಮಾನ ಸ್ವೀಕರಿಸಬಾರದು ಎನ್ನುವುದು ಆತನ ಆಯ್ಕೆಯಾಗಿತ್ತು ಈ ಎಲ್ಲಾ ಕಾರಣಗಳಿಂದಾಗಿ ರಾಜಣ್ಣ ಕನ್ನಡ ಸಾಹಿತ್ಯ ಪರಿಷತ್ತನ್ನು ಜನರ ಸಾಹಿತ್ಯ ಪರಿಷತ್ತನ್ನಾಗಿ ಪರಿವರ್ತಿಸಿದ ಕೀರ್ತಿಗೆ ಪಾತ್ರರಾಗುತ್ತಾನೆ ಈತನ ಅಗಲಿಕೆಯಿಂದಾಗಿ ಸಾಹಿತ್ಯ ಪ್ರೇಮಿಗಳಲ್ಲಿನ ಒಂದು ಆತ್ಮೀಯ ಸಂಪರ್ಕದ ಕೊಂಡಿ ಕಳಚಿದಂತಾಗಿದೆ ಕುಟುಂಬದ ಸದಸ್ಯರಂತೆ ಅವರ ಆತ್ಮೀಯ ಬಳಗಕ್ಕೂ ಕೂಡ ರಾಜಣ್ಣನ ಸಾವು ಭರಿಸಲಾಗದ ನಷ್ಟವಾಗಿದೆ ರಾಜಣ್ಣನ ಕುಟುಂಬದ ಎಲ್ಲಾ ಹಿರಿಯ ಕಿರಿಯು ಸದಸ್ಯರ ವಿಶೇಷತೆ ಎಂದರೆ ಆತ್ಮೀಯುತೆ ಸ್ನೇಹಶೀಲತೆಸೇವಗುಣಗಳಾಗಿವೆ ಅವರೆಲ್ಲರಲ್ಲಿ ರಾಜ ನನ್ನದು ಸ್ವಲ್ಪ ಹೆಚ್ಚಿನ ಆತ್ಮೀಯ ಸಂಪರ್ಕವಿತ್ತುಇಂಥಹ ಸಂದರ್ಭದಲ್ಲಿ ರಾಜಣ್ಣನ ಅನಾರೋಗ್ಯದ ಸಂದರ್ಭದಲ್ಲಿ ರಾಜಣ್ಣನಿಗೆ ಉಪಚಾರಗೈದ ಸಹೋದರಿ ಶ್ರೀಮತಿಭಾರತಿ ಮಗಳುಭುವನಾ,ಚಿರಂಜೀವಿಯವರ ಹಾಗೂ ಅವರ ಬಂಧು ಬಳಗದ ತ್ಯಾಗ ಸಹನೆಯನ್ನು ಎಷ್ಟು ನೆನೆದರು ಸಾಲದು ರಾಜಣ್ಣನ ಈ ಸಾವಿನ ದುಃಖವನ್ನು ಭರಿಸುವ ಶಕ್ತಿ ಭಗವಂತ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತಾ ನಮ್ಮೆಲ್ಲರ ಆತ್ಮೀಯತೆಯ ಪ್ರತಿರೂಪದಂತಿದ್ದ ರಾಜಣ್ಣನಿಗೆ ಕೊಪ್ಪಳ ಕಸಾಪ ಮತ್ತು ಕನ್ನಡ ಮನಸಿನ ಎಲ್ಲರೂ ನುಡಿನಮನ ಸಲ್ಲಿಸಿದ್ದಾರೆ.

# ಮೂಡಲಗಿ ಶೈಕ್ಷಣಿಕ ವಲಯದಲ್ಲಿ ಕನ್ನಡ ಪರೀಕ್ಷೆಗೆ 156 ವಿದ್ಯಾರ್ಥಿಗಳು



ಮೂಡಲಗಿ:ಎಸ್.ಎಸ್.ಎಲ್.ಸಿ ಸೋಮವಾರ ಮೊದಲ ದಿನದ ಕನ್ನಡ ಪರೀಕ್ಷಗೆ ಮೂಡಲಗಿ ಶೈಕ್ಷಣಿ ವಲಯದಲ್ಲಿ 87 ಪ್ರೌಢ ಶಾಲೆಗಳಿಂದ 21 ಪರೀಕ್ಷಾ ಕೇಂದ್ರಗಳಲ್ಲಿ 7957 ವಿದ್ಯಾರ್ಥಿಗಳು ಪೈಕಿ 156 ಗೈರಾಗಿ 7801 ವಿಧ್ಯಾರ್ಥಿ ಪರೀಕ್ಷೆ ಬರೆದಿದ್ದಾರೆ ಮೂಡಲಗಿ ಬಿಇಒ ಅಜೀತ ಮನ್ನಿಕೇರಿ ತಿಳಿಸಿದ್ದಾರೆ.

ಮೂಡಲಗಿ ಶೈಕ್ಷಣಿಕ ವಲಯದಲ್ಲಿ ಮೂಡಲಗಿ, ಪಟಗುಂದಿ, ಸುಣಧೋಳಿ ವಡೇರಹಟ್ಟಿ ಪರೀಕ್ಷಾ ಕೇಂದ್ರ ಚಿಕ್ಕೋಡಿ ಶೈಕ್ಷಣಿ ಜಿಲ್ಲಾ ಪರೀಕ್ಷಾ ನೋಡಲ್
ಅಧಿಕಾರಿಗಳು ಮತ್ತು ಮೂಡಲಗಿ ಬಿಇಒ ಅಜೀತ ಮನ್ನಿಕೇರಿ ಅವರು ಮೂಡಲಗಿಯ ನಾಲ್ಕು ಪರೀಕ್ಷಾಕೇಂದ್ರ ಮತ್ತು ಖಾನಟ್ಟಿ, ನಾಗನೂರ ಪರೀಕ್ಷಾ ಕೇಂದ್ರಗಳಗೆ ಭೆಟ್ಟಿ ನೀಡಿ ಪರೀಸಿಲಿಸಿದರು.

ಕನ್ನಡ ಪರೀಕ್ಷಾ ಕೇಂದ್ರಗಳಲ್ಲಿ ಎಲ್ಲ ದೃಶಾವಳಿಗಳನ್ನು ಪರೀಕ್ಷಾ ಮಂಡಳಿಯ ನಯಮಾನುಸಾರ ಸಿಸಿ ಕ್ಯಾಮೆರಾಗಳ ಅಳವಡಿಸಿದನ್ನು ಮೂಡಲಗಿ ಕ್ಷೇತ್ರಶಿಕ್ಷಾಣಾಧಿಕಾರಗಳ ಕಾರ್ಯಲಯದಲ್ಲಿ ವಿಕ್ಷೇಣೆಯ ವ್ಯವಸ್ಥೆಯನ್ನು ಮಾಡಲಾಗಿತ್ತು.

ಪ್ರಥಮ ದಿನ ಕನ್ನಡ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಪುಷ್ಪ ನೀಡಿ ಸ್ವಾಗತಿಸಿದರು. ಮೊದಲ ದಿನದ ಪರೀಕ್ಷೆಯು ಶಾಂತಿರೀತಿಯಲ್ಲಿ ಜರುಗಿದವು

# ಆರ್‌ವೈಎಂಇಸಿಯಲ್ಲಿ ಆಹ್ವಾನಿತ ಚರ್ಚೆ"ವಿಕಸಿತ ಭಾರತಕ್ಕಾಗಿ ಸ್ಥಳಿಯ ತಂತ್ರಜ್ಞಾನಗಳು"ಕುರಿತು ವಿಶೇಳ ಕಾರ್ಯಕ್ರಮ




ಬಳ್ಳಾರಿ ಮಾ-:. ಬಳ್ಳಾರಿ ನಗರದ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಯಾದ ವೀ.ವಿ.ಸಂಘದ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಖಇಇಇ ಐ.ಈ.ಈ.ಈ ವಿದ್ಯಾರ್ಥಿ ಘಟಕ – ಖಖಃ99412 & ಬೇಸಿಕ್ ಸೈನ್ಸಸ್ ವಿಜ್ಞಾನ ವಿಭಾಗ ವತಿಯಿಂದ , ವಿಜ್ಞಾನ ವೇದಿಕೆಯ ರಾಷ್ಟ್ರೀಯ ವಿಜ್ಞಾನ ದಿನದ ಆಚರಣೆಗಳು-2024, "ವಿಕಸಿತ ಭಾರತಕ್ಕಾಗಿ ಸ್ಥಳೀಯ ತಂತ್ರಜ್ಞಾನಗಳು" ಕುರಿತು ವಿಶೇಳ ಕಾರ್ಯಕ್ರಮ ಜರುಗಿತು.

ಸಂಪನ್ಮೂಲ ವ್ಯಕ್ತಿ ವಿಜಯನಗರ ಶ್ರೀಕೃಳ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕರು – ಡಾ. ಖಡ್ಕೆ ಉದಯಕುಮಾರ್, ಪ್ರಾಂಶುಪಾಲರು ಡಾ.ಟಿ.ಹನುಮಂತ ರೆಡ್ಡಿ, ಉಪ ಪ್ರಾಂಶುಪಾಲರು ಡಾ.ಸವಿತಾ ಸೋನೋಳಿ, ಆರ್.ವೈಎಂಇಸಿಯ ಬೇಸಿಕ್ ಸೈನ್ಸಸ್ ವಿಭಾಗಗಳಾದ-ಗಣಿತಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ವಿಭಾಗಳ ಮುಖ್ಯಸ್ಥರು ಡಾ.ಸುಮಂಗಳ.ಬಿ, ಡಾ.ನಾಗಭೂಳಣ, ಡಾ.ಕೊಟ್ಟೂರೇಶ್ವರ.ಎನ್.ಎಂ, ತಾಂತ್ರಿಕ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿ ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರು ಡಾ. ಕೋರಿ ನಾಗರಾಜ್, ಡೀನ್-ಅಕಾಡಮಿಕ್ ಡಾ.ಹೆಚ್ ಗಿರೀಶ್, ಡಾ.ತೋಟಪ್ಪ ಸಿ, ಏಐಎಂಎಲ್ ವಿಭಾಗದ ಮುಖ್ಯಸ್ಥರು ಡಾ. ಸಾಯಿ ಮಾಧವಿ, ಪ್ರಾಧ್ಯಾಪಕರು –ಡಾ. ಬಿ.ವೀರೇಶ್, ಡಾ.ಜೀವರ್ಗಿ ಫಕೀರಪ್ಪ, ಡಾ.ಆನಂದ್.ಟಿ, ಸಂಗಮೇಶ್, ಮಂಜುನಾಥ್, ಪ್ರಭಾಕರ ಮೇಟಿ, ವೀಣಾ.ಬಿ, ಅಂಬಿಕಾ, ಶಿವಮ್ಮ, ಮತ್ತು ಬೋಧಕೇತರ ಸಿಬ್ಬಂದಿ, ಐ.ಈ.ಈ.ಈ ಸಿಬ್ಬಂದಿ ಮತ್ತು ವಿದ್ಯಾರ್ಥಿ ಸದಸ್ಯರು, ವಿಜ್ಞಾನ ವಿಭಾಗಗಳ ಸಿಬ್ಬಂದಿ ಮತ್ತು ಆರ್.ವೈ.ಎಂ.ಇ.ಸಿ.ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಆರಂಭದಲ್ಲಿ ಗಣಿತ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಶ್ರೀಮತಿ ಗಂಗಮ್ಮ ಸ್ವಾಗತಿಸಿ ಕಾರ್ಯಕ್ರಮ ನರೂಪಿಸಿದರು. ಇಸಿಇ ವಿಭಾಗದ ವಿನಾಯಕ ಪ್ರಾರ್ಥಿಸಿದರು, ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಜಯಶ್ರೀ ಅವರು ಎಲ್ಲರನ್ನು ಸ್ವಾಗತಿಸಿದರು. ಗಣ್ಯರಿಂದ ಜ್ಯೋತಿ ಬೆಳಗಿಸಿದ ನಂತರ, ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಭಾಗ್ಯ ಕೆ.ಆರ್ ಪ್ರಾಸ್ತಾವಿಕ ಮಾತನಾಡಿದರು. ಡಾ. ಸವಿತಾ ಸೋನೋಳಿ, ಐ.ಈ.ಈ.ಈ ಚೇರ್, & ಇಸಿಇ ವಿಭಾಗದ ಮುಖ್ಯಸ್ಥರು ಮತ್ತು ಉಪ ಪ್ರಾಂಶುಪಾಲರು ಮಾತನಾಡಿದರು. ಆರ್.ವೈ.ಎಂ.ಇ.ಸಿ.ಯ ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರೊ. ಡಾ.ಆನಂದ್.ಟಿ , ಸಂಪನ್ಮೂಲ ವ್ಯಕ್ತಿ ಡಾ.ಖಡ್ಕೆ ಉದಯಕುಮಾರ್ (ಭೌತಶಾಸ್ತ್ರ ಅಧ್ಯಯನ ವಿಭಾಗ, ವಿ.ಎಸ್.ಕೆ. ವಿಶ್ವವಿದ್ಯಾಲಯ, ಬಳ್ಳಾರಿ) ಅವರ ಸಂಕ್ಷಿಪ್ತ ಬಯೋ-ಡೇಟಾವನ್ನು ಸಭೆಗೆ ಪರಿಚಯಿಸಿದರು.

ಡಾ. ಖಡ್ಕೆ ಉದಯಕುಮಾರ್ "ಅಭಿವೃದ್ಧಿ ಹೊಂದಿದ ಮತ್ತು ಸ್ವಾವಲಂಬಿ ಭಾರತದ ದೃಷ್ಟಿಯನ್ನು ಸಾಧಿಸಲು ಸ್ವದೇಶಿ ಆವಿಷ್ಕಾರಗಳನ್ನು ಉತ್ತೇಜಿಸುವ ಪ್ರಾಮುಖ್ಯತೆಯನ್ನು ' ವಿಕಸಿತ ಭಾರತಗಾಗಿ ಸ್ಥಳೀಯ ತಂತ್ರಜ್ಞಾನಗಳು' ವಿಳಯವು ಒತ್ತಿಹೇಳುತ್ತದೆ. ಸ್ಥಳೀಯ ತಂತ್ರಜ್ಞಾನಗಳ ಶಕ್ತಿಯನ್ನು ಬಳಸಿಕೊಳ್ಳುವ ಮೂಲಕ, ಭಾರತವು ತನ್ನ ನಾಗರಿಕರನ್ನು ಸಶಕ್ತಗೊಳಿಸಬಹುದು, ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಬಹುದು, ಸಾಮಾಜಿಕ ಆರ್ಥಿಕ ವಿಭಜನೆಗಳನ್ನು ಸೇತುವೆ ಮಾಡಬಹುದು ಮತ್ತು ಅದರ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಬಹುದು. ನಾವು ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸುತ್ತಿರುವಾಗ, ಸಮೃದ್ಧಿ ಮತ್ತು ಪ್ರಗತಿಯತ್ತ ವಿಕಸಿತ ಭಾರತದ ಪ್ರಯಾಣಕ್ಕೆ ವೇಗವರ್ಧಕಗಳಾಗಿ ಸ್ಥಳೀಯ ತಂತ್ರಜ್ಞಾನಗಳನ್ನು ಪೋಷಿಸುವ ಮತ್ತು ಉತ್ತೇಜಿಸುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸೋಣ." ಎಂದು ಮಾತನಾಡಿದರು.

ಡಾ.ಟಿ.ಹನುಮಂತ ರೆಡ್ಡಿ "ಶಾಲೆಗಳು ಮತ್ತು ಕಾಲೇಜುಗಳಲ್ಲಿ ಸ್ಥಳೀಯ ತಂತ್ರಜ್ಞಾನದ ಪರಿಕಲ್ಪನೆಯನ್ನು ಪ್ರೋತ್ಸಾಹಿಸುವುದು, ಬಾಲ್ಯದಿಂದಲೇ ನಾವೀನ್ಯತೆ ಮತ್ತು ಸ್ವಾವಲಂಬನೆಯ ಸಂಸ್ಕೃತಿಯನ್ನು ಪೋಷಿಸಲು ಅತ್ಯಗತ್ಯ. ಸ್ಥಳೀಯ ಸಂಪನ್ಮೂಲಗಳು ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಬಳಸಿಕೊಳ್ಳುವ ಪ್ರಾಯೋಗಿಕ ಪ್ರಾಜೆಕ್ಟುಗಳು ಮತ್ತು ಪ್ರಾಯೋಗಿಕ ಪ್ರದರ್ಶನಗಳು ವಿದ್ಯಾರ್ಥಿಗಳಿಗೆ ಸ್ಥಳೀಯ ತಂತ್ರಜ್ಞಾನಗಳು ಮತ್ತು ಅವುಗಳ ಅನ್ವಯಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ನೀಡುತ್ತದೆ. ಇದಲ್ಲದೆ, ಸ್ಥಳೀಯ ಕೈಗಾರಿಕೆಗಳು ಮತ್ತು ಸಂಶೋಧನಾ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಸ್ಥಾಪಿಸುವುದು ವಿದ್ಯಾರ್ಥಿಗಳಿಗೆ ನೈಜ-ಪ್ರಪಂಚದ ಮಾನ್ಯತೆ ಮತ್ತು ಸ್ಥಳೀಯ ಸವಾಲುಗಳಿಗೆ ಸ್ಥಳೀಯ ಪರಿಹಾರಗಳನ್ನು ಅಭಿವೃದ್ಧಿಪಡಿಸುವಲ್ಲಿ ಸಹಯೋಗವನ್ನು ನೀಡುತ್ತದೆ." ಎಂದರು

ಡಾ. ಸವಿತಾ ಸೋನೋಳಿ, "ರಾಷ್ಟ್ರೀಯ ವಿಜ್ಞಾನ ದಿನದ ಪ್ರಾಥಮಿಕ ಗುರಿ ಜನರಲ್ಲಿ ವಿಜ್ಞಾನದ ಮಹತ್ವ ಮತ್ತು ಅದರ ಅನ್ವಯಗಳ ಬಗ್ಗೆ ಅರಿವು ಮೂಡಿಸುವುದು. ಪ್ರತಿ ವರ್ಷ, ವಿವಿಧ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಭಾರತದ ಪ್ರಮುಖ ವಿಜ್ಞಾನ ಉತ್ಸವಗಳಲ್ಲಿ ಒಂದಾಗಿ ಆಚರಿಸಲಾಗುತ್ತದೆ, 2024 ರ ರಾಷ್ಟ್ರೀಯ ವಿಜ್ಞಾನ ದಿನದ ವಿಳಯವು " ವಿಕಸಿತ ಭಾರತಕ್ಕಾಗಿ ಸ್ಥಳೀಯ ತಂತ್ರಜ್ಞಾನಗಳು", ಇದು ಭಾರತದ ವೈಜ್ಞಾನಿಕ ಪ್ರಗತಿಯಲ್ಲಿ ಸ್ವದೇಶಿ ಆವಿಷ್ಕಾರಗಳ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. ಈ ಥೀಮ್ ದೇಶದ ಅಭಿವೃದ್ಧಿ ಮತ್ತು ಯೋಗಕ್ಷೇಮಕ್ಕೆ ಕೊಡುಗೆ ನೀಡಬಹುದಾದ ಸ್ಥಳೀಯ ತಂತ್ರಜ್ಞಾನಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತದೆ " ಎಂದು ಈದಿನದ ಪ್ರಾಮುಖ್ಯತೆ ವಿವರಿಸಿದರು.

ಡಾ.ಭಾಗ್ಯ ಕೆ.ಆರ್ "ರಾಷ್ಟ್ರೀಯ ವಿಜ್ಞಾನ ದಿನದಂದು, ಶಾಲೆಗಳು ಮತ್ತು ಸಂಸ್ಥೆಗಳ ವಿದ್ಯಾರ್ಥಿಗಳು ವಿವಿಧ ವಿಜ್ಞಾನ ಯೋಜನೆಗಳನ್ನು ಪ್ರಸ್ತುತಪಡಿಸುತ್ತಾರೆ. ಹೆಚ್ಚುವರಿಯಾಗಿ, ರಾಷ್ಟ್ರೀಯ ಮತ್ತು ರಾಜ್ಯ ವಿಜ್ಞಾನ ಸಂಸ್ಥೆಗಳು ತಮ್ಮ ಇತ್ತೀಚಿನ ಸಂಶೋಧನೆಗಳನ್ನು ಪ್ರದರ್ಶಿಸುತ್ತವೆ"ಎನ್ನುತ್ತಾ ಪ್ರಾಸ್ತಾವಿಕ ಮಾತನಾಡಿದರು. ಗಣ್ಯರಿಂದ ಸಂಪನ್ಮೂಲ ವ್ಯಕ್ತಿಯನ್ನು ಗೌರವಿಸಿ, ಆರ್ ವೈಎಂಇಸಿಯ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರು ಡಾ. ಸುಮಂಗಳ.ಬಿ ಅವರು ವಂದಿಸಿದರು. ವಿವಿ ಸಂಘ ಉಪಾಧ್ಯಕ್ಷರು, ಆರ್.ವೈ ಎಂ.ಇ.ಸಿ.ಅಧ್ಯಕ್ಷರು, ಅಲ್ಲಂ ಚನ್ನಪ್ಪ, ಆಡಳಿತ ಮಂಡಳಿಯ ಸದಸ್ಯರು- ಜಿ ಎಂ ಮಲ್ಲಿಕಾರ್ಜುನ ರೆಡ್ಡಿ, ಬಸವರಾಜ ರೂಪನಗುಡಿ,ಕೊರ್ಲಗುಂದಿ ಬಸವನಗೌಡ,ಜಾನೆಕುಂಟೆ ಪೊಂಪನ ಗೌಡ,ಹಲಕುಂದಿ ಸತೀಶ್ ಕುಮಾರ್, ಶುಭಾಶಯಗಳು ತಿಳಿಸಿದರು.

# ಆರೋಗ್ಯ ಅಭಿವೃದ್ಧಿ ಮತ್ತು ಆಸ್ಥಿ ನಿರ್ವಹಣೆ ಬಗ್ಗೆ ತಜ್ಞ ಪ್ರೋಪೇಸರ್‌ಗಳಿಂದ ಕಾನೂನಾತ್ಮಕ ಸಲಹೆ ಹಾಗೂ ಮಾಹಿತಿ ಕಾರ್ಯಕ್ರಮ



ಬಳ್ಳಾರಿ ಮಾ -: ಬಳ್ಳಾರಿಯ ಆರ್ಯವೈಶ್ಯ ಅಫೀಷಿಯಲ್ಸ್ ಮತ್ತು ಪ್ರೊಫೈಫೆಳನಲ್ಸ್ ಅಸೋಸಿಯೇಳನ್ ವತಿಯಿಂದ. ನಗರದ ಜನತೆಗೆ ವಿಶೇಳವಾದ ಕಾರ್ಯಕ್ರಮವನ್ನ ಹಮ್ಮಿಕೊಳ್ಳಲಾಗಿದೆ.ಸಾರ್ವಜನಕರಿಗೆ ಇತ್ತಿಚಿನ ದಿನಗಳಲ್ಲಿ ಅತಿ ಮುಖ್ಯವಾಗಿ ಬೇಕಾಗಿರುವ. ಆರೋಗ್ಯ ಮತ್ತು ಸ್ಥಿರಾಸ್ತಿ ವ್ಯವಹಾರ ಮತ್ತು ನರ್ವಹಣೆ ಅರಿವು ಮೂಡಿಸುವ ಉದ್ದೇಶದಿಂದ ದಿನಾಂಕ 24/03/2024 ಬೆಳಗ್ಗೆ 10 ಗಂಟೆಗೆ ಶ್ರೀ ಮೇಧಾ ಕಾಲೇಜಿನ ಪ್ರಾಂಗಣದಲ್ಲಿ, ಈ ವಿಶೇಳವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು.

ವಿಜಯನಗರ ವಿದ್ಯಾಸಂಸ್ಥೆಯ ಅಂಕೋಲಾಜಿ ಪ್ರೋಪೇಸರ್ ಡಾ॥ ಮಾಣಿಕ್ಯಾರಾವ್ ಕುಲಕರ್ಣಿ ಅವರು ಮಹಾಮಾರಿ ಕ್ಯಾನ್ಸರ್ ಹಾಗು ವಿವಿಧ ಖಾಯಿಲೆಗಳ ಬಗ್ಗೆ ಅರಿವು ಮೂಡಿಸಲಿದ್ದಾರೆ.ಇನ್ನು, ಸ್ಥಿರಾಸ್ತಿ ಮತ್ತು ವ್ಯವಹಾರಗಳ ಮಾಹಿತೆ ಸಲಹೆಗಳ ಬಗ್ಗೆ, ಖ್ಯಾತ ವಕೀಲರಾದ ವೈ.ರಂಗನಾಥ್ ಅವರು ವಿವರಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರು ಬಾಗಿಯಾಗಿ,ಸಂಬಂಧಪಟ್ಟ ವಿಚಾರಗಳ ಬಗ್ಗೆ ತಿಳಿಯಲು ಮತ್ತು ಪ್ರಶ್ನಿಸಿ ಉತ್ತರ ಪಡೆಯಲು ಅವಕಾಶ ಒದಗಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರು ಮತ್ತು ಖ್ಯಾತ ಲೆಕ್ಕ ಪರಿಶೋಧಕರಾದ ಜಯ ಪ್ರಕಾಶ್ ಗುಪ್ತ ಅವರು ತಿಳಿಸಿದ್ದಾರೆ.

## ನಿಜಗುಣ ದೇವರ ವಿದ್ಯಾ ಸಂಸ್ಥೆಯ 'ಅಣ್ಣ ತಂಗಿ ಅನುಬಂಧ' ವಿನೂತನ ಕಾರ್ಯಕ್ರಮ

# ಸಾಧನೆಗಿಂತ ಸಂಸ್ಕಾರ ದೊಡ್ಡದ್ದು-ಗಜಾನನ



ಮೂಡಲಗಿ: ಆಧುನಕ ಜಗತ್ತಿನಲ್ಲಿ ಸಂಬಂಧಗಳ ಮಹತ್ವ ನಶಿಸಿ ಹೋಗುವ ಸಮಯದಲ್ಲಿ ಅದರ ಮಹತ್ವ ತಿಳಿಸುವ ಕಾರ್ಯಕ್ರಮವೇ ಅಣ್ಣ ತಂಗಿ ಅನುಬಂಧ ಕಾರ್ಯಕ್ರಮ ಎಂದು ಧಾರವಾಡದ ಶಾಲಾ ಶಿಕ್ಷಣ ಇಲಾಖೆಯು ನವೃತ್ತ ಜಂಟಿ ನರ್ದೇಶಕ ಗಜಾನನ ಮನ್ನಿಕೇರಿ ಹೇಳಿದರು.

ಅವರು ತಾಲೂಕಿನ ಹುಣಶ್ಯಾಳ ಪಿಜಿ ಗ್ರಾಮದ ಶ್ರೀ ಸಿದ್ಧಲಿಂಗ ಕೈವಲ್ಯಾಶ್ರಮದಲ್ಲಿ ಶ್ರೀ ನಜಗುಣ ದೇವರ ವಿದ್ಯಾಸಂಸ್ಥೆ ವತಿಯಿಂದ ಜರುಗಿದ 'ಅಣ್ಣ ತಂಗಿ ಅನುಬಂಧ' ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಸಾಧನೆಗಿಂತ ಸಂಸ್ಕಾರ ದೊಡ್ಡದ್ದು ಜನರಲ್ಲಿ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳುವಂತಹ ಕಾರ್ಯಕ್ರಮವನ್ನು ಶ್ರೀ ನಜಗುಣ ದೇವರು ಮಾಡುತ್ತಿರುವುದು ಕಾರ್ಯ ಶ್ಲಾಘನೀಯವಾದದ್ದು, ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡುತ್ತಿರುವುದು ಒಳ್ಳೇಯ ಕಾರ್ಯವಾಗಿದೆ ಎಂದರು.

ಅಧ್ಯಕ್ಷತೆಯನ್ನು ಗೋಕಾಕದ ಜ್ಞಾನಮಂದಿರದ ಧರ್ಮದರ್ಶಿನ ಸುವರ್ಣಾತಾಯಿ ಹೊಸಮಠ ಮಾತನಾಡಿ, ಇಂದಿನ ತಂತ್ರಜ್ಞಾನದ ಯುಗದಲ್ಲಿ ನಜಗುಣ ದೇವರು ಗ್ರಾಮೀಣ ಪ್ರದೇಶದಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಹಳ್ಳಿಯ ಸೊಗಡನ್ನು ಬಿಂಬಿಸುವಂತಹ ಕಾರ್ಯವನ್ನು ಮಾಡುತ್ತಿರುವುದರಿಂದ ಮಕ್ಕಳಲ್ಲಿ ಸಾಮಾನ್ಯ ಜ್ಞಾನ ಹೆಚ್ಚಾಗುತ್ತದೆ. ಮನೆಯಲ್ಲಿಯೇ ವಿವಿಧ ಬಗೆಯ ಅಡುಗೆ ಮಾಡಿಕೊಂಡು ಮನೆಯ ಕುಟುಂಬದವರೊಂದಿಗೆ ಮತ್ತು ಸ್ನೇಹಿತರೊಂದಿಗೆ ಊಟ ಮಾಡುವ ಮೂಲಕ ಅಣ್ಣತಂಗಿ ಸಂಬಂಧವನ್ನು ಬೆಳೆಸುವಂತಹ ಕಾರ್ಯ ನಜಗುಣ ದೇವರು ಮಾಡಿದ್ದಾರೆ. ಮಕ್ಕಳ ಜೊತೆಗೆ ನಜಗುಣ ದೇವರು ಊಟ ಮಾಡುವ ಮೂಲಕ ಮಕ್ಕಳಿಗೆ ಪುಷ್ಟ ನೀಡುವುದರ ಜೊತೆಗೆ ಮಕ್ಕಳ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ,ನಂಬಿಕೆ ಎದ್ದು ಕಾಣುತ್ತದೆ ಎಂದರು.

ಸಾನ್ನಿಧ್ಯ ವಹಿಸಿದ ಶ್ರೀ ನಜಗುಣ ದೇವರು ಮಾತನಾಡಿ, ಮಕ್ಕಳಿಗೆ ಅಧ್ಯಾತ್ಮಿಕತೆಯ ಜೊತೆಗೆ ಸಂಸ್ಕಾರ ಮುಖ್ಯವಾಗಿದೆ. ಅಣ್ಣತಂಗಿ ಅನುಬಂಧ ಕಾರ್ಯಕ್ರಮವು ವಿನೂತನವಾಗಿ ಮಾಡಲಿಕ್ಕೆ ಪಾಲಕರು, ಗ್ರಾಮಸ್ಥರು ಸಹಕಾರ ನೀಡಿದ್ದು ಅವರಿಗೆ ಸಿದ್ಧಲಿಂಗನ ಆಶೀರ್ವಾದ ಸದಾ ಇರುತ್ತದೆ.

ಮಕ್ಕಳಲ್ಲಿ ಪ್ರೀತಿ, ವಾತ್ಸಲ್ಯ, ಸಂಬಂಧವನ್ನು ಬೆಳೆಸಲಿಕ್ಕೆ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು ಯಶಸ್ವಿಗೆ ಸಹಕರಿಸಿದ ಎಲ್ಲರ ಮೇಲೆ ಭಗವಂತನ ಕೃಪೆ ಇರುತ್ತದೆ ಎಂದರು.ವೇದಿಕೆಯಲ್ಲಿ ಚಿದಾನಂದ ಶರಣರು, ಸಿಆರ್ ಪಿ ಆನಂದ ಹಮ್ಮನವರ, ಸಂಗಕೇರಿ ಸರಕಾರಿ ಪ್ರಾಥಮಿಕ ಎಸ್‌ಡಿಎಂಸಿ ಅಧ್ಯಕ್ಷ ಸಾತಪ್ಪಾ ಚಿಕ್ಕೋಡಿ, ರಾಮನಾಯ್ಕ ನಾಯ್ಕ ಇದ್ದರು.ಇದೇ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಜಂಟಿ ನರ್ದೇಶಕರಾಗಿ ನವೃತ್ತಿ ಹೊಂದಿದ ಪ್ರಯುಕ್ತ ಗಜಾನನ ಮನ್ನಿಕೇರಿ ಅವರನ್ನು ಶ್ರೀ ನಜಗುಣ ದೇವರ ವಿದ್ಯಾಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.